Regn No M 1229 | 43rd Year | Sri 'Satyavadi' Mysore | 18—2—1951

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
"ಸತ್ಯವಾದಿ" ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಸತ್ಯವಾದಿ

ಸ್ಥಾಪಕರು— ಆರಮನೆ ನಿಂಸ್ವೇದನ್ ಎಂ. ಎ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

Practical Cow
ಗೋಸಂರಕ್ಷಣೆ ಮಾಡಿ.
ಗೋ ರಕ್ಷಣಾ ಕಾರ್ಯಕ್ಕೆ
ಹೆಚ್ಚು ಪ್ರಚಾರ ನಡೆಯಲಿ

ಭಾರತ ರಾಜಾಂಗ ಕಾಶ್ಮೀರಕೆ ಪೂರ್ಣ ಜಾರಿ ಆಗಬೇಕು

ಶೀಲರ

ಗುಂಡಿನೇಟು ನಿಂತಿಲ್ಲ

ನವ ದೆಹಲಿ 17 — ಕರೀಂಗಂಜಿನ ಬಳಿ ಪಾಕಿಸ್ತಾನ ಸೇನಿಕರು ಗೋಲೀ ಬಾರು ಮಾಡುತ್ತಿರುವ ಬಗ್ಗೆ ಪ್ರಜಾ ಸೋಷಲಿಸ್ಟ್ ಪಕ್ಷದ ಈರ್ವರು ಸದಸ್ಯರು ಲೋಕಸಭೆಯಲ್ಲಿ ಆತಂಕ ವ್ಯಕ್ತಮಾಡಿದರು

ಜವಾಬ್ದಾರಿಯುತರಿಂದ ಪರಿಶೀಲನೆ

ನವ ದೆಹಲಿ 17 — ಮಹಾಯುದ್ಧ ವ್ಯವಹಾರದ ಬಗ್ಗೆ ಪರಿಶೀಲಿಸಲು ಜವಾಬ್ದಾರಿಯುತ ಅಧಿಕಾರಿಯೋರ್ವನ ನೇಮಕವಾಗಿದೆ ಎಂದು ರಾಜ್ಯಸಭೆಯಲ್ಲಿ ಶ್ರೀ|| ಪಂತರು ತಿಳಿಸಿದರು

ಮೊಹಲ್ಲ ದಿನಾಚರಣೆ

ಈ ತಿಂಗಳು ಮೊಹಲ್ಲ ದಿನಾಚರಣೆಯನ್ನು ಮೈಸೂರು ಪುರಸಭೆ ಆಶ್ರಯದಲ್ಲಿ ಶುಕ್ರವಾರ ಮುಂಡಿಮೊಹಲ್ಲ ಕಲಾಪಗೇರಿಯಲ್ಲಿ ಆಚರಿಸಲಾಯಿತು ಪುರಸಭೆ ಅಧ್ಯಕ್ಷ ಶ್ರೀ ಬಿ ಎ ಕೆಂಗೇಗೌಡ ಇವರ ಅಧ್ಯಕ್ಷತೆಯಲ್ಲಿ ಸೇರಿದ್ದ ಬಹಿರಂಗ ಸಭೆಯಲ್ಲಿ ಡಾ|| ಬಿ ಜಿ ದಾಸರು ಭಾಷಣ ಮಾಡಿದರು

ಕೃಷಿ

7 — ಕಳೆದ ವರ್ಷದ ಲೊ
34 ಶೇಕಡಾದ ಪತಿ ಎ
ಗಳು ಹೆಚ್ಚಾದ್ದರಲ್ಲಿರು

ಇನ ಅಧಿಕೃತ
ಗೆಯಿಂದ ಮತ್ತು
ರಾಜ್ಯಗಳಾದ
ಮತ್ತು ಬರ್ಮಾ
ಯಾ ಸಾಧ್ಯವಿದೆ ಎಂದು
ನಿಸಿದೆ.

ಜಮ್ಮು 17 — ಕಾಶ್ಮೀರ ಮುಖ್ಯ ಮಂತ್ರಿ ಶೇಕ್ ಗುಲಾಂ ಮಹಮದರು ಪ್ರಾಂತ ವಿಧಾನ ಸಭೆಯಲ್ಲಿ ಹೇಳಿಕೆಯನ್ನಿತ್ತು, ಭಾರತದ ಘಟನೆಗಳನ್ನು ಕಾಶ್ಮೀರಕ್ಕೆ ತರುವ ಬಗ್ಗೆ ಕಾವು ಪುತ್ತು ತಮ್ಮ ಪಕ್ಷ ವೇಗವಾಗಿದೆ ಎಂದು ತಿಳಿಸಿದರು ಡೆಮೊಕ್ರಾಟಿಕ್ ಫ್ರಂಟಿನ ನಾಯಕರಾದ ಜಿ ಎಂ ಸಾದಿಕ್‌ರವರು ಮಾತನಾಡುತ್ತಾ, ಭಾರತದ ಘಟನೆಯನ್ನು ಕಾಶ್ಮೀರಕ್ಕೆ ಜಾರಿ ಮಾಡುವ ಕಾಲ ಈಗ ಬಂದಿದೆ ಎಂದರು

ಅನುಕೂಲವಾದರೆ ಒಪ್ಪಂದ

ಲಂಡನ್ 17 — ಆಕ್ರಮಣ ನಿರೋಧ ಒಪ್ಪಂದದಿಂದ ಬಿಕ್ಕಟ್ಟು ಕಡಿಮೆ ಆಗುವದಾದರೆ ಅದನ್ನೊಪ್ಪುವದಾಗಿ ಬ್ರಿಟಿಷ ಪ್ರಧಾನಿ ಮ್ಯಾಕ್ಮಿಲನ್‌ರು ರಷ್ಯದೊಡನೆ ಆಕ್ರಮಣ ನಿರೋಧ ಒಪ್ಪಂದ ಮಾಡಿಕೊಳ್ಳುವ ಕುರಿತು ತಿಳಿಸಿದರು

ಸಭಾತ್ಯಾಗ

ಹೈದರಾಬಾದು 17 — ನಾನ್ ಗೆಜಿಟೆಡ್ ನೌಕರರ ವೇತನ ಸಂಬಂಧ ಸಹಾನುಭೂತಿ ವ್ಯಕ್ತಮಾಡಿ ಆಂಧ್ರ ಪ್ರದೇಶ ವಿಧಾನ ಸಭೆಯ ಹೊಸ ವಿರೋಧ ಪಕ್ಷ ಕಮ್ಯುನಿಸ್ಟರೊಡನೆ ಸಭಾತ್ಯಾಗ ಮಾಡಿತು

ಗುಂಡಿನೇಟು ನಿಂತಿಲ್ಲ

ಕರೀಂಗಂಜ್ 17 — ಪಠಾರಿಯ ಬಿಟ್ಟಗಳ ಹರ್ಕಿತಿಲ್ಲ ಮೇಲೆ ಪಾಕಿ ಸ್ತಾನ ಪೋಲೀಸರು ಗೋಳಬಾರು ಮುಂದುವರಿಯುತ್ತಿದೆ.

ಕಲ್ಕತ್ತ 17 — ಪೂರ್ವ ಪಾಕಿಸ್ತಾನದ 3 ರೈಫಲುದಳದವರು ಇಚ್ಛತಿ ನದಿ ದಾಟಿ ಭಾರತ ಪ್ರದೇಶಕ್ಕೆ ಬಂದು ಭಾರತದ 40 ಬಿಸ್ತರನ್ನು ಬಂಧಿಸಿದ್ದರು

ಸಾಲಪಡೆಯಲೊಪ್ಪಿಗೆ

ಬೆಂಗಳೂರು 17 — ಈ ದಿನ ಸಮಾವೇಶವಾಗಿದ್ದ ಪುರಸಭೆ ಕಾಲ್ಪೊರೇಷನ್ ಕೇಂದ್ರ ಸರ್ಕಾರದಿಂದ ರೂ 3 ಲಕ್ಷ ಸಾಲ ಪಡೆಯುವ ನಿರ್ಧಾರ ಮಾಡಿದೆ ಈ ಸಾಲ ಉಪಯೋಗಿಸುವದು ಕಾಂಪೋಸ್ಟ ಗೊಬ್ಬರ ತಯಾರು ಮಾಡುವದಕ್ಕೆ. ಮೇಯರ್ ಶ್ರೀ ಎಸ್ ನಾರಾಯಣಜೆಟ್ಟಿಯವರು ಕಮಿಷನರ್ ಶ್ರೀ ಎಂ ಎಸ್ ಸ್ವಾಮಿನಾಥನ್‌ರನ್ನು ಸಭೆಗೆ ಪರಿಚಯ ಮಾಡಿಕೊಟ್ಟರು ಕಮಿಷನರು ಮಾತನಾಡಿ ತಮ್ಮ ಅಧಿಕಾರ ಅವಧಿಯಲ್ಲಿ ಯಾವ ರಾಜಕೀಯ ಪಕ್ಷಕ್ಕೂ ಪಕ್ಷಪಾತವಾಡದೆ ಕೆಲಸ ನಿರ್ವಹಿಸುವ ಭರವಸೆ ಇತ್ತರು

ಮೈಸೂರಿನ ವಶಕ್ಕೆ

ಬಳ್ಳಾರಿ 16 — ಬಳ್ಳಾರಿ-ಬೆಂಗಳೂರು ರಸ್ತೆಯನ್ನು ಹಿರಿಯೂರ್ 7 ಮೈಲುಗಳ ರಸ್ತೆಯನ್ನು ಅಂಧ್ರದಿಂದ ಮೈಸೂರು ಸರ್ಕಾರಕ್ಕೆ ವರ್ಗವಾಗಿದೆ

ಶಿಕ್ಷಣ ಅಗತ್ಯ

ಬೆಂಗಳೂರು 17 — ಇಲ್ಲಿನ ಲಾ ಕಾಲೇಜಿನ ಸಂಘದ ಸಮಾರಂಭಾಷಣವನ್ನು ಡಾ|| ಸಿ ಪಿ ರಾಮಸ್ವಾಮಿ ಅಯ್ಯರು ನೆರವೇರಿಸುತ್ತಾ, ಕಾನೂನಿನ ವ್ಯಾಖ್ಯಾನದ ಬಗ್ಗೆ ಶಾಸಕರಿಗೆ ಶಿಕ್ಷಣ ಕೊಡುವದು ಅಗತ್ಯವೆಂದು ತಿಳಿಸಿದರು

ಮಂತ್ರಿಗಳಿಗೆ ಭತ್ಯ

ನವ ದೆಹಲಿ 17 — ಬಿಲ್ ಎರಿಕೆ ಯಾಗಿನಂತೆಯೆ ಮುಂದುವರಿದರೆ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಕಟ್ಟಿ ಭತ್ಯ ಕೇಳಿದರೆ ಆಶ್ಚರ್ಯವೇನಿಲ್ಲ ಎಂದು ಆಚಾರ್ಯ ಕೃಪಾಲಿನಿ ಲೋಕಸಭೆಯಲ್ಲಿ ತಿಳಿಸಿದರು

ಅನಿರೀಕ್ಷಿತ ಫಲಿತಾಂಶ

ಬೆಂಗಳೂರು 17 — ವೈಶ್ಯ ಸೂರು ವಾಣಿಜ್ಯ ಸಂಘದಲ್ಲಿ ಡಾ|| ಸಿ ಪಿ ರಾಮಸ್ವಾಮಿ ಅಯ್ಯರು ಮಾತನಾಡುತ್ತ, ಶೈತರು ಸ್ವಂತ ಆಸ್ತಿಗೆ ಗಮನಕೊಟ್ಟಿರುವ ಈ ದೇಶದಲ್ಲಿ ಸಹಕಾರ ವ್ಯವಸಾಯ ಪದ್ಧತಿ ವಿದೇಶಿಯದು ಅದರಿಂದ ಅನಿರೀಕ್ಷಿತ ಫಲಿತಾಂಶಗಳುಂಟಾಗಬಹುದು ಎಂದರು

ಪ್ರತಿಭಟನೆ

ನವ ದೆಹಲಿ 17 —ಕಳೆದ ತಿಂಗಳು 13 ಮತ್ತು 14 ರಂದು ಕಾಶ್ಮೀರ ಮೇಲೆ ಅಪರಿಚಿತ ವಿಮಾನ ಹಾರಿದ ಬಗ್ಗೆ ವಿಶ್ವಸಂಸ್ಥೆ ವೀಕ್ಷಕರಿಗೆ ಭಾರತ ಸರ್ಕಾರ ಪ್ರತಿಭಟಿಸಿದೆ

ಜನನ ತೆರಿಗೆ

ನವದೆಹಲಿ 16 — ಪ್ರೊ || ನಿಕೊಲಾಸ್ ಕಾಲ್ಡೋರವರು ಕಳೆದ ಡಿಸೆಂ ಒಂದು ತಿಂಗಳಲ್ಲಿ ಹಣಕಾಸಿನ ಸಂಬಂಧವಾದ ಕನ್ಸಲ್ಟೇಟಿವ್ ಸಮಿತಿಯನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ, ಜನನ ತೆರಿಗೆಯನ್ನು ವಿಧಿಸಬೇಕೆಂಬ ಸಲಹೆಯನ್ನು ಮಾತಿಲ್ಲವೆಂದು, ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಸಾಲೆಯ ಹಂಚಾಂಗ

ಆ|| ಮಹಾವಿದ್ವಾ ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದಂದ
19 ಏಪ್ರಿಲ್ ಆದಿತ್ಯ

ಸ್ವಂತ ಆರ್ಥಿಕ ಸ್ಥಿತಿ ನಿರ್ಮಾಣಕ್ಕೆ ಸರ್ವ ಪಕ್ಷಗಳೂ ಸಹಕರಿಸಬೇಕೆಂದು ಗೃಹ ಮಂತ್ರಿ ಪಂ|| ಪಂತರು ನಿನ್ನೆ ದಿನ ಲೋಕಸಭೆಯಲ್ಲಿ ಮಾತನಾಡುತ್ತಾ ತಿಳಿಸಿದರು.

ದಿವ್ಯವಾಣಿ

ಪ್ರಜಾಪ್ರಭುತ್ವವೆಂದರೆ, ಆವಿದ್ಯಾವಂತರಿಂದ ಸರಕಾರ, ಕುಲೀನರಿಂ ಶ್ರ ಭೂತ್ವವೆಂದರೆ ವಿದ್ಯಾವಂತರಿಂದ ಸರಕಾರ. — ಜಿ. ಕೆ. ಚೆಸ್ಟರ್ಟನ್.

ಪ್ರೆಸ್ ನೋಟು

ಬೆಂಗಳೂರು 17— ಮೈಸೂರು ತಾಲ್ಲೂಕಿನ ಗೋವುಟಗಿರಿ ಗ್ರಾಮದ ಹತ್ತಿರವಿರುವ ದೇವಸ್ಥಾನ ವಸ್ತು ವಿಗ್ರಹವನ್ನು ಸಂರಕ್ಷಿಸಲ್ಪಟ್ಟ ಮಾನ್ಯಮೆಂ ಟುಗಳೆಂದು ಮೈಸೂರು ಸರಕಾರ ಘೋಷಿಸಿದೆ

ಪಶು ಮತ್ತು ಕೋಳಿ ಪ್ರದರ್ಶನ

ಬೆಂಗಳೂರು 17— ಅಖಿಲ ಭಾರತ ಪಶು ಹಾಗೂ ಕೋಳಿ ಪ್ರದರ್ಶನ ವು ನಡೆಯುವ ಬೆಂಗಳೂರಿನ ಸುಭಾಷ ನಗರ ಮೈದಾನದಲ್ಲಿ ಹಲವು ಅಂಗಡಿಗಳು ಹಾಗೂ ವಿಭಾಗಗಳ ನಿರ್ಮಾಣ ಕಾರ್ಯ ನಡೆದು ಸಂಭ್ರಮದ ವಾತಾವರಣ ನೇರ್ಪಟ್ಟಿರುವುದು ; ಈ ತಿಂಗಳು 22 ರಿಂದ ಮಾರ್ಚ್ 1 ರವರೆಗೆ ನಡೆಯುವುದು; ಈ ಪ್ರದರ್ಶನವನ್ನು ಅಖಿಲ ಭಾರತ ಪಶು ಪ್ರದರ್ಶನ ಸಮಿತಿಯವರು ಏರ್ಪಡಿಸಿರುವರು

ರಾಜಕೀಯ ಸಂತ್ರಸ್ತರಿಗೆ ನೆರವು

ನವದೆಹಲಿ 17— ಸುಮಾರು 800 ಮಂದಿ ರಾಜಕೀಯ ಸಂತ್ರಸ್ತರು ಭಾರತ ಸರ್ಕಾರದ ಗೃಹಮಂತ್ರಿ ಶಾಖೆಯು ನಿಧಿಯಿಂದ ಹಣ ಕಾಸಿನ ನೆರವು ಪಡೆದಿರುವರೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು — ಮೈಸೂರು ರಾಜ್ಯದಲ್ಲಿ 124 ಮಂದಿ ರಾಜಕೀಯ ಸಂತ್ರಸ್ತರಿಗೆ ಈ ನೆರವು ದೊರೆತಿದೆ.

ಸಾಹಸಿ ರೈತ !

ಸೋಕ್, ಉತ್ತರ ಪ್ರದೇಶದ ಅಗ್ರಾ ಜಿಲ್ಲೆಯ ಹಿಂದು ಗ್ರಾಮ : ಆ ಗ್ರಾಮಕ್ಕೆ ಸೇರಿದ ಬೇಸಾಯಗಾರ ಹುಂಬಿಲಾಸ್ ಈ ಪ್ರದೇಶದಲ್ಲಿ ಒಂದು ಸಾಹಸವನ್ನೇ ಸಾಧಿಸಿದ್ದಾನೆ : 49 ವರ್ಷಗಳ ವಯಸ್ಸಿನ ಈ ರೈತನ ವಿಷಯದಲ್ಲಿ ಈ ಪ್ರದೇಶದ ಜನರಿಗೆ ಎಲ್ಲಿಲ್ಲದ ಗೌರವ — ಮೂರು ವರ್ಷಗಳ ಹಿಂದೆ ಗ್ರಾಮ ಪಂಚಾಯಿತಿ ಅಧ್ಯಕ್ಷನಾಗಿ ಆತ ಚುನಾಯಿತನಾದ : 'ಗ್ರಾಮದ ಒಟ್ಟು 305 ಕುಟುಂಬಗಳಿಗೆ ಸೇರಿದ 1612 ಜನ ವೈಕಿ ಶೇ. 80 ಕ್ಕೂ ಹೆಚ್ಚು ಜನ ಆತನ ಅನುಯಾಯಿಗಳಾಗಿ ನಿಲ್ಲುವಂತೆ ಮಾಡಿದ ಸಾಹಸ ಆತನದು — ಆತ ಹೇಳುವುದಾದರೂ ಇಷ್ಟೆ : 'ತಾಳ್ಮೆ ಬದಲಾಗಿದೆ ತನ್ಮೂಲ, ಜನರು ವಿಶ್ವಾಸ ಗಳಿಸಬೇಕಾದರೆ ಅವರ ನಾಮಶೇಷ ವಹಿಸಿಕೊಳ್ಳುವ ಜೊತೆಗೆ ಎಂತಹ ತ್ಯಾಗಕ್ಕೂ ಸಿದ್ಧನಾಗಿರಬೇಕು !'

'Sri 'SATYAVADI' Daily

Oldest Newspaper in the State ; Splendid Advertiser

Advertisement Tariff

Casual	Rs 1-50 per inch
Contract above 100 inches	1-00
500	0-75

Column length 12½ inches; width 2 inches; 4 columns to a page.
The decision of the management is final in all matters.

Manager "Satyavadi", Chamarajpuram, Mysore

For Quality Printing ಎಲ್ಲ ವಿಧದ ಅಯಸ್ಕಾಂತದ ಔಷಧಗಳಿಗೂ

L. N. Press ಅಶೋಕ ಫಾರ್ಮಸಿ

Sivarampet, Mysore ಅಶೋಕ್ ಸ್ಟಾಂಡ್ ಬಜಾರ್, ಮೈಸೂರು

ಕಿಕ್ಕಿರಿದ ಜನಸಂದಣಿಗೆ
ಪ್ರದರ್ಶಿತವಾಗುತ್ತಿರುವ

ವುಡ್‌ಲ್ಯಾಂಡ್ ಯಶಸ್ವಿ 3 ನೇ ವಾರ

ನ್ಯೂ ಓರಿಯಂಟ್ ಫಿಲ್ಮ್ಸ್‌ನವರ — ಸಂಗೀತಪೂರ್ಣ ಹಾಸ್ಯಮಯ ಚಿತ್ರ

ದಿಲ್ಲೀ – ಕ – ಥಗ್ (ಹಿಂದಿ)

ತಾರಾಗಣ— ನೂತನ, ಕಿಶೋರ್, ಸ್ಮೃತಿಬಿಸ್ವಾಸ್ | ದಿನ 3 ಪ್ರದರ್ಶನಗಳು
ನೀರಿನ ನೃತ್ಯಗಳು ಗೇಮಾಕಲರಿನಲ್ಲಿ — ನೋಡಲು ಮರೆಯದಿರಿ

ಅಪೆರಾ— ಜಯಪ್ರದ 2 ನೇ ವಾರ

ಚಂಬುಲಕ್ಕಿ ಟ್ರೈ

ಅಂಜಲಿದೇವಿ, ನಾಗೇಶ್ವರರಾವ್, ರಂಗಂಬಾವ್, ತಂಗವೇಲು ಇ. ವಿ. ಸರೋಜ
ಪಾಶ್ಚಾತ್ಯಹಿನುಯಿವ ಚಿತ್ರಾಕರ್ಷಕ ತಮಿಳು ಚಿತ್ರ [ಪ್ರತಿದಿನ 3 ಆಟಗಳು

Office of
the Municipal Commissioner
C. M. C. Dated 6-2-59

No. R8. PR. 397 / 58-59

ನೋಟಿಫಿಕೇಷನ್

ಮೈಸೂರು ಲಷ್ಕರ್ ಮೊಹಲ್ಲಾ ಕೆಸರೆ ಬ್ಲಾಕಿನಲ್ಲಿರುವ ಕುರಿಗಳ ಕಸಾಯಿಮನೆಗೆ ವಧೆಗಾಗಿ ತರಲ್ಪಡುವ ಕುರಿ, ಆಡು, ಮೇಕೆ ಮುಂತಾದ ಪ್ರಾಣಿಗಳ ಮೇಲೆ ವಿಧಾಯುಕ್ತವಾದ ದಂದಂತೆ 1959 ನೇ ಏಪ್ರಿಲ್ 1 ನೇ ತಾರೀಕು ಲಾಗಾಯ್ತು 1960 ನೇ ಮಾರ್ಚ್ ಅಖೈರ್ ವರುವಿಗೆ ಡೈಲಿಫೀಯನ್ನು ವಸೂಲ್ಮಾಡುವ ಹಕ್ಕನ್ನು ತಾ|| 20-2-1959 ನೇ ಶುಕ್ರವಾರ ದಿವಿ 10-30 ಗಂಟೆ ಲಾಗಾಯ್ತು ಕಸಾಯಿಮನೆ ಬಳಿ ಬಹಿರಂಗವಾಗಿ ಹರಾಜುಮಾಡಿಸಲ್ಪಡುತ್ತೆ. ಇಷ್ಟವುಳ್ಳವರು ಸಕಾಲಕ್ಕೆ ಹಾಜರಾಗಿ ಹರಾಜು ಪರತ್ತುಗಳಿಗನುಸಾರವಾಗಿ ಛಡಸವಾಲು ಮೂಲಕ ಭಾಗವನ್ನು ಪಡೆಯಬಹುದು. ವಿವರಗಳನ್ನು ಆಫೀಸು ವೇಳೆಯಲ್ಲಿ ರವಿನ್ಯೂ ಆಫೀಸಿನಲ್ಲಿ ತಿಳಿಯಬಹುದು.

ಏ ಸೂ — ಹಕ್ಕಿನ ಅವಧಿ 1959 ನೇ ಏಪ್ರಿಲ್ 1 ನೇ ತಾರೀಖು ಲಾಗಾಯ್ತು 1960 ನೇ ಮಾರ್ಚ್ ಅಖೈರ್ ವರುವಿಗೆ ಮಾತ್ರ.

A. P. Lakshmirajaiah
Ml. Commissioner I/C

B. S. K
High-class Gent
Upadhyaya's
Sayy
SON

Edited
Dharma
Krishna
Press